ರೇಷ್ಮೆ ಕಾರ್ಖಾನೆಯಲ್ಲಿ ಬಂದಿರುವ ಆದಾಯ ಹಾಗೂ ನಷ್ಟದ ಬಗ್ಗೆ ಹಾಗೂ ನೌಕರ ಉದ್ಯೋಗಿಗಳ ಬಗ್ಗೆ

೧೭೭. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ರೇಷ್ಮೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಳೆದ ಮೂರು ವರ್ಷಗಳಲ್ಲಿ ಮೈಸೂರಿನಲ್ಲಿರುವ ಸರ್ಕಾರಿ ರೇಷ್ಮೆ ಕಾರ್ಖಾನೆಯಲ್ಲಿ ಬಂದಿರುವ ಆದಾಯ ಅಥವಾ ಆಗಿರುವ ನಷ್ಟವೆಷ್ಟು?

ಆ) ಸದರೀ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿರುವ ಉದ್ಯೋಗಿಗಳ ಸಂಖ್ಯೆ ಎಷ್ಟು ಹಾಗೂ ಉದ್ಯೋಗಿಗಳನ್ನು ನೇಮಕ ಮಾಡುವಲ್ಲಿ ಅನುಸರಿಸಿರುವ ಕ್ರಮಗಳೇನು?

ಇ) ಸದರೀ ಕಾರ್ಖಾನೆಯನ್ನು ನವೀಕರಿಸಲು ಸರ್ಕಾರ ವೆಚ್ಚ ಮಾಡಿರುವ ಹಣವೆಷ್ಟು?

ಶ್ರೀ ಕೆ. ಎಂ. ಮುನಿಯಪ್ಪ (ರೇಷ್ಮೆ ಸಚಿವರು).—

ಅ) ಮೈಸೂರಿನಲ್ಲಿರುವ ಸರ್ಕಾರಿ ರೇಷ್ಮೆ ನೇಯಿಗೆ ಕಾರ್ಖಾನೆಯು ಕರ್ನಾಟಕ ರೇಷ್ಮೆ ಉದ್ಯಮಗಳ ನಿಗಮ ನಿಯಮಿತದ ಒಂದು ಘಟಕವಾಗಿದ್ದು ಕಳೆದ ಮೂರು ವರ್ಷಗಳಿಂದ ಈ ಕೆಳಕಂಡಂತೆ ಲಾಭ ಮತ್ತು ನಷ್ಟವನ್ನು ಅನುಭವಿಸಿದೆ.

(ರೂ. ಲಕ್ಷಗಳಲ್ಲಿ)

೧೯೮೪-೮೫	೧೯೮೫-೮೬	೧೯೮೬-೮೭
(—) ೫೮.೧೫	(+) ೧೭.೮೪	(—) ೩೦.೯೭

ಆ) ಡಿಸೆಂಬರ್ ೧೯೮೭ರವರೆಗೆ ಒಟ್ಟು ೧,೧೧೩ ಜನ ಉದ್ಯೋಗಿಗಳು ಸದರೀ ಕಾರ್ಖಾನೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಕಾರ್ಖಾನೆಗೆ ಅಗತ್ಯವಾಗಿ ಬೇಕಾದಂಥ ಹುದ್ದೆಗಳನ್ನು ನೇಮಕ ಮಾಡಿಕೊಳ್ಳುವುದಕ್ಕಿಂತ ಮುಂಚಿತವಾಗಿ ಸದರಿ ಹುದ್ದೆಗಳ ವಿವರಗಳನ್ನೊಳಗೊಂಡಂತೆ ಸ್ಥಳೀಯ ವೃತ್ತ ಪತ್ರಿಕೆಗಳಲ್ಲಿ ಜಾಹೀರಾತು ನೀಡಿ ಅರ್ಜಿಗಳನ್ನು ಆಹ್ವಾನಿಸಲಾಗುವುದು. ಜಾಹೀರಾತಿನನುಗುಣವಾಗಿ ಬಂದ ಅರ್ಜಿಗಳನ್ನು ಪರಿಶೀಲಿಸಿ ಅರ್ಹತಾ ನಿಭಂದನೆಗಳನ್ನು ಪೂರೈಸುವ ಅಭ್ಯರ್ಥಿಗಳನ್ನು ಸಂದರ್ಶನಕ್ಕೆ ಕರೆಯಲಾಗುವುದು. ಹುದ್ದೆಗಳನ್ನು ಭರ್ತಿ ಮಾಡಲು ವ್ಯವಸ್ಥಾಪಕ ನಿರ್ದೇಶಕರು ರಚಿಸಿರುವ ನೇಮಕಾತಿ ಸಮಿತಿ ಹಾಗೂ ಬೇರೆ ಬೇರೆ ಇಲಾಖೆಗಳಿಂದ ಬರುವ ಪ್ರತಿನಿಧಿಗಳಿಂದೊಡಗೂಡಿದ ಸಂದರ್ಶನ ಸಮಿತಿಯಿಂದ ಅರ್ಹತೆಯ ಆಧಾರದ ಮೇಲೆ ಆಯ್ಕೆಯಾದ ಅಭ್ಯರ್ಥಿಗಳನ್ನು ಸರ್ಕಾರಿ ವಿಂಸಲಾತಿಗನುಗುಣವಾಗಿ ಭರ್ತಿ ಮಾಡಿಕೊಳ್ಳಲಾಗುವುದು.

ಇ) ಮೈಸೂರಿನ ರೇಷ್ಮೆ ನೇಯ್ಗೆ ಕಾರ್ಖಾನೆಯ ನವೀಕರಣಕ್ಕಾಗಿ ಹೂಡಿರುವ ಬಂಡವಾಳ ರೂ. ೫೦೦.೬೩ ಲಕ್ಷಗಳು.

ವಿದ್ಯುತ್ ಉತ್ಪಾದಿಸಲು ಖಾಸಗಿ ಕೈಗಾರಿಕೋದ್ಯಮಿಗಳಿಂದ ಅರ್ಜಿ

೧೮೦. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ವಿದ್ಯುತ್ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವಿದ್ಯುತ್ ಉತ್ಪಾದಿಸಲು ಎಷ್ಟು ಜನ ಖಾಸಗಿ ಕೈಗಾರಿಕೋದ್ಯಮಿಗಳು ಅರ್ಜಿ ಸಲ್ಲಿಸಿದ್ದಾರೆ.

ಆ) ಸರ್ಕಾರದವರು ಈ ಬಗ್ಗೆ ಇದುವರೆವಿಗೆ ಕೈಗೊಂಡಿರುವ ಕ್ರಮಗಳೇನು ?

ಇ) ಜನರೇಟರ್‌ಗಳ ಮೂಲಕ ವಿದ್ಯುತ್ ಉತ್ಪಾದಿಸಿ ಸಣ್ಣ ಕೈಗಾರಿಕೆಗಳಿಗೆ ವಿದ್ಯುತ್ ಸರಬರಾಜು ಮಾಡಲು ಸರ್ಕಾರದವರು ಏನಾದರೂ ಯೋಜನೆ ತಯಾರಿಸಿದ್ದಾರೆಯೇ ? ಹಾಗಿದ್ದಲ್ಲಿ ಯಾವ ಸ್ಥಳಗಳಲ್ಲಿ ಯಾವ ಯಾವ ನಗರಗಳಲ್ಲಿ ಅವುಗಳನ್ನು ಸ್ಥಾಪಿಸಲು ಯೋಜಿಸಲಾಗಿದೆ ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ರಾಜ್ಯ ಮಂತ್ರಿಗಳು).—

ಅ) ಮತ್ತು ಆ) ಒಂಬತ್ತು ಖಾಸಗಿ ಕೈಗಾರಿಕೆಗಳಿಗೆ ಕ್ಯಾಪ್ಟೀವ್ ಉತ್ಪಾದನೆ, ವಿನಿ ಹೈಡಲ್ ಯೋಜನೆಗಳನ್ನು ಗಂತ್ರಿಗೆ ಮೇಲೆ ಕೊಡಲಾಗಿದೆ.

ಇ) ಯಲಹಂಕದ ಒಳ ೧೨೦ ಮೆಗಾವ್ಯಾಟ್ ಸಾಮರ್ಥ್ಯದ ಕ್ಯಾಪ್ಟೀವ್ ಜನರೇಟರನ್ನು ಸ್ಥಾಪಿಸಲು ಮಂಡಳಿಯಂ ಕ್ರಮ ತೆಗೆದುಕೊಳ್ಳಲ್ಪತ್ತಾ ಇದೆ. ಜಮುಖಂಡಿ, ಕೋಲಾರ, ಇಂಡಿ ಮತ್ತು ಬೀದರ್‌ಗಳ ಹತ್ತಿರ ಒಟ್ಟು ೭೭.೭೬ ಮೆಗಾವ್ಯಾಟ್ ಸಾಮರ್ಥ್ಯದ ಡೀಸಲ್ ಜನರೇಟರನ್ನು ಸ್ಥಾಪಿಸಲು ಸಹ ಮಂಜೂರಾತಿ ದೊರಕಿದೆ.

ಹಾಲಿನ ದರವನ್ನು ಹೆಚ್ಚಿಸುವ ಬಗ್ಗೆ

೮೧. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಒಂದು ಲೀಟರ್‌ಗೆ ಕೊಡುವ ದರವೆಷ್ಟು ?

ಆ) ಇದರಲ್ಲಿ ಮಧ್ಯವರ್ತಿಗಳಾದ ಕೆ.ಎಂ.ಎಫ್. ಮತ್ತು ಆಯಾಯಾ ಯೂನಿಯನ್‌ಗಳವರು ಲೀಟರಿಗೆ ಎಷ್ಟು ದರ ಪಡೆಯುತ್ತಾರೆ ?

ಇ) ಹಾಲು ಉತ್ಪಾದಕರಿಗೆ ಈಗ ಕೊಡುತ್ತಿರುವ ಬೆಲೆಯು ಕಮ್ಮಿಯೆಂದೂ ಮಧ್ಯವರ್ತಿಗಳಿಗೆ ನೀಡುತ್ತಿರುವ ಪೊತ್ತವನ್ನು ಹಾಲು ಉತ್ಪಾದಕನಿಗೆ ಕೊಡಬೇಕೆಂದು ಮನವಿ ಬಂದಿರುವುದು ನಿಜವೆ ?

ಈ) ಹಾಲು ಉತ್ಪಾದಕನಿಗೆ ಉತ್ಪಾದಿಸಲು ತಗಲುವ ವೆಚ್ಚವನ್ನು ತಾಲನೆ ಮಾಡಿ ಹಾಲು ದರವನ್ನು ಏರಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ಸಿದ್ಧರಾಮಯ್ಯ, (ಪಶುಸಂಗೋಪನಾ ಮಂತ್ರಿ, ಪಶುವೈದ್ಯ ಸೇವೆಗಳ ಸಚಿವರು).—

ಅ) ರಾಜ್ಯದಲ್ಲಿ ಹಾಲು ಉತ್ಪಾದಕರಿಗೆ ಶೇಕಡಾ ೪.೫ ಜಿಡ್ಡು ಮತ್ತು ೮.೫ ಜಿಡ್ಡೇತರ ಘನ ಪದಾರ್ಥದ ಒಂದು ಲೀಟರ್ ಹಾಲಿಗೆ ರೂ. ೩.೪೩ ಪೈಸೆಯ ದರ ನೀಡಲಾಗುತ್ತಿದೆ.

ಆ) ಮಧ್ಯವರ್ತಿಗಳಾದ ಕೆ.ಎಂ.ಎಫ್‌ನವರಂ ಕೆ.ಜಿ.ಯೊಂದಕ್ಕೆ ೧ ಪೈಸೆ ಮತ್ತು ಯೂನಿಯನ್ ನವರಂ ೧೧ ಪೈಸೆಯನ್ನು ಸಹಕಾರ ಸಂಘದವರು ೩ ಪೈಸೆಯನ್ನು ಲೆವಿಯಾಗಿ ಪಡೆಯುತ್ತಿದ್ದಾರೆ.

ಇ) ಇಲ್ಲ

ಈ) ಉದ್ಭವಿಸುವುದಿಲ್ಲ.

ಡೈರಿಗಳ ಸ್ಥಾಪನೆ ಹಾಗೂ ಅದರ ಸಂಖ್ಯೆ

೩೮೩. ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಪಶುಸಂಗೋಪನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿರುವ ಹಾಲು ಸಂಸ್ಕರಣಾ ಕೇಂದ್ರ, ಪ್ಯಾಡೆಕ್ಟ್ ಡೈರಿ, ಶೀತಲ ಕೇಂದ್ರ ಮತ್ತು ಘಾರಂ ಕೂಲರ್‌ಗಳ ಸಂಖ್ಯೆ ಎಷ್ಟು ? (ಜಿಲ್ಲಾವಾರು ವಿವರ ಕೊಡುವುದು)

ಆ) ಪ್ರತಿಯೊಂದರ ಸಂಸ್ಕರಣಾ ಸಾಮರ್ಥ್ಯವೆಷ್ಟು ಹಾಗೂ ಹಾಲಿ ಎಷ್ಟು ಲೀಟರ್ ಹಾಲನ್ನು ಸಂಸ್ಕರಣೆ ಮಾಡಲಾಗುತ್ತಿದೆ ?

ಇ) ಡೈರಿ, ಶೀತಲ ಕೇಂದ್ರ ಮತ್ತು ಘಾರಂ ಕೂಲರ್‌ಗಳನ್ನು ಹೊಸದಾಗಿ ಪ್ರಾರಂಭಿಸುವ ಆಗತ್ಯವಿದೆಯೇ, ಹಾಗಿದ್ದಲ್ಲಿ, ಸ್ಥಾಪಿಸಲಂ ಕೈಗೊಂಡಿರುವ ಕ್ರಮಗಳೇನು ?

ಈ) ಕೋಲಾರ ಜಿಲ್ಲೆಯ ಬೆಳಗಾನ ಹಳ್ಳಿಯ ಬಳಿ ಸ್ಥಾಪಿಸಲು ಉದ್ದೇಶಿಸಿರುವ ಡೈರಿಯನ್ನು ಯಾವಾಗ ಪ್ರಾರಂಭಿಸಲಾಗುವುದು ?